ಕುರಿತು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈಗಾಗಲೇ ಪತ್ರಿಕೆಯಲ್ಲಿ ವರದಿಯಾಗಿರುವ ಹಾಗೆ ಸನ್ಮಾನ್ಯ ಮುಖ್ಯ ನ್ಯಾಯಾಧೀಶರು ಮೇ 30 ರಂದು ಒಂದು ಪತ್ರವನ್ನು ಬರೆದಿದ್ದಾರೆ. ಈ ಪತ್ರ ಸರ್ಕಾರಕ್ಕೆ ತಲು ದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ೇತವನ್ನು ಅಲಂಕರಿಸಿದರು.) ಆ ಪತ್ರದ ಹಿನ್ನೆಲೆಯಲ್ಲಿ ಸರ್ಕಾರ ಏನು ಕೆಲಸ ಮಾಡಬೇಕಾಗಿದೆ, ಯಾವ ಯಾವ ಹೆಜ್ಜೆಗಳನ್ನು ಇಡಬೇಕಾಗಿದೆ ನಮ್ಮ ಸ್ಪಂದನೆ ಏನು ಇತ್ಯಾದಿಗಳ ಬಗ್ಗೆ ಸರ್ಕಾರ ವಿವರವಾದ ಹೇಳಿಕೆಗಳನ್ನು ಮಾಡಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳವರ ಜೊತೆಯಲ್ಲಿ ಚರ್ಚೆ ಮಾಡಿ ನಾಳೆ ಯಾವ ವೇಳೆಯಲ್ಲಿ ಈ ಚರ್ಚೆಗೆ ಸಮಯ ನಿಗದಿಪಡಿಸಲಾಗುವುದೋ ಆ ಸಮಯಕ್ಕೆ ವಿವರವಾಗಿ ಹೇಳಿಕೆಯನ್ನು ನೀಡಬೇಕಾಗುತ್ತದೆ. ಏಕೆಂದರೆ ಜನತೆಯನ್ನು ಆತಂಕಕ್ಕೆ ಒಳಪಡಿಸುವುದು ಬೇಡ. ಹೈಕೋರ್ಟ್ ಕೆಲವು ಕರಾರು ಹೇಳಿ ಕಾಂಪ್ಲೆಕ್ಸ್ ಹೇಗಿರಬೇಕು, ಅದರ ನಾರ್ಮ್ಸ್ ಏನು ಎಂಬ ಬಗ್ಗೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಆದರೆ ನಮ್ಮ ಹುಬ್ಬಳ್ಳಿ, ಧಾರವಾಡ ಹಾಗೂ ಗುಲ್ಬರ್ಗಾದಲ್ಲಿ ಸರ್ಕಿಟ್ ಬೆಂಚ್ ಸ್ಥಾ ಸುವುದರ ಬಗ್ಗೆ ಯಾವುದೇ ಅಡೆತಡೆ ಬರುವಂತಹ ಪ್ರಶ್ನೆಯೇ ಇಲ್ಲ. ನಾವು ಏನು ಬೇಸಿಕ್ ಫೆಸಿಲಿಟೀಸ್ ಪ್ರೊವೈಡ್ ಮಾಡಬೇಕು. , ಸಿಕಲ್ ಇನ್‌ಸ್ಟ್ರಾಸ್ಟ್ರಕ್ಚರ್ ಪ್ರೊವೈಡ್ ಮಾಡಬೇಕು, ಇವುಗಳ ಬಗ್ಗೆ ಮಾತ್ರ ಅವರು ಪ್ರಸ್ತಾಪಗಳನ್ನು ಮಾಡಿದ್ದಾರೆಯೇ ಹೊರತು ನಮ್ಮ ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ ಸರ್ಕಿಟ್ ಬೆಂಚ್‌ಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅವರು ವ್ಯತ್ಯಾಸವನ್ನು ಹೊಂದಿಲ್ಲ ಅನ್ನುವುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ಈ ವಿಷಯದ ಬಗ್ಗೆ ಯಾರೂ ಸಹ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಈ ಸಂದರ್ಭದಲ್ಲಿ ಸರ್ಕಾರದ ಬದ್ಧತೆ, ಸರ್ಕಾರ ಈಗಾಗಲೇ 20 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿ ಹಣವನ್ನು ಈ ಉದ್ದೇಶಕ್ಕಾಗಿ ತೆಗೆದಿರಿಸಿದೆ. ಅದನ್ನು ಸಹಿತ ಈ ಸಂದರ್ಭದಲ್ಲಿ ನೆನ ಸಿಕೊಳ್ಳುತ್ತಾ ಬರುವ ದಿವಸಗಳಲ್ಲಿ ಯಾವ ಹೆಜ್ಜೆಗಳನ್ನು ಇಡುತ್ತೇವೆ. ಅದರ ಬಗ್ಗೆ ವಿವರವಾಗಿ ಹೇಳಿಕೆಯನ್ನು ನಾಳೆ ನಾನು ಸದನಕ್ಕೆ ನೀಡುತ್ತೇನೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–** (ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, ಈ

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಕರ್ನಾಟಕ ಸರ್ಕಾರದ (ಜಿಲ್ಲಾ ಪಂಚಾಯಿತಿಗಳು) ವರದಿಯನ್ನು ಸಭೆಯ ಮುಂದಿಡುತ್ತೇನೆ.

(ಕಾಗದ ಪತ್ರಗಳನ್ನು ಲಗತ್ತಿಸಿದೆ.)

I **ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ)** ಅವರು :-

**ಭಾರತದ ಸಂವಿಧಾನದ ಅನುಚ್ಛೇದ 323ರ ಪರಿಚ್ಛೇದ (2)ರ ಅನ್ವಯದ ಮೇರೆಗೆ:**

1. ಕರ್ನಾಟಕ ಲೋಕಸೇವಾ ಆಯೋಗದ 2003–04ನೇ ಸಾಲಿನ ವಾರ್ಷಿಕ ವರದಿ.

**1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ಮತ್ತು 49ನೇ ಪ್ರಕರಣದ ಮೇರೆಗೆ:**

1. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.
4. ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.
5. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.
6. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ.
7. ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ